


ವಿಕ್ಷಿಪ್ತ ಪಾತ್ರಗಳ ರೂವಾರಿ ಉಪೇಂದ್ರ



ವಜ್ರಮುನಿ, ಸುಧೀರ್, ತೂಗುದೀಪ ಶ್ರೀನಿವಾಸ್‌ರಂಥ ಕಲಾವಿದರನ್ನು ಈ ಅವಧಿಯಲ್ಲಿ ಗುರ್ತಿಸುವುದು ಕಷ್ಟ.

ಈ ಹುಡುಕಾಟವನ್ನು ಒಂದು ರೂಪಕದ ಮೂಲಕ ಹೇಳಬಹುದು. ರಾಜಕುಮಾರ್ ಅಭಿನಯದ 'ಭಕ್ತ ಪ್ರಹ್ಲಾದ' ಚಿತ್ರದ ಕ್ಲೈಮ್ಯಾಕ್ಸ್ ನೆನಪಿಸಿಕೊಳ್ಳಿ. 'ಎಲ್ಲಿದ್ದಾನೆ ಶ್ರೀಹರಿ?' ಎಂದು ಹಿರಣ್ಯಕಶಿಪು ಅಬ್ಬರಿಸುತ್ತ, ಪ್ರಹ್ಲಾದನನ್ನು ಕಾಡುವ ಸನ್ನಿವೇಶವದು. 'ನನ್ನಲ್ಲು ನಿನ್ನಲ್ಲು ಎಲ್ಲೆಲ್ಲೂ ಹರಿ ಇದ್ದಾನೆ' ಎನ್ನುವ ಪ್ರಹ್ಲಾದನ ಮಾತಿನಿಂದ ರೊಚ್ಚಿಗೇಳುವ ಹಿರಣ್ಯಕಶಿಪು, ಗದೆಯಿಂದ ಕಂಬವೊಂದನ್ನು ಅಪ್ಪಳಿಸಿದಾಗ ನರಸಿಂಹ ಕಾಣಿಸಿಕೊಳ್ಳುತ್ತಾನೆ. ಹಿರಣ್ಯಕಶಿಪುವಿನ ಹರಿಯ ಈ ಹುಡುಕಾಟ ಈ ಹೊತ್ತು ಬೇರೆಯದೇ ರೂಪು ತಳೆದಿದೆ. ಖಳನಾಯಕ ನಾಯಕನಿಗಾಗಿ ಹಂಬಲಿಸಿದ ಸಂದರ್ಭ ಇಂದು ತಿರುಗು ಮುರುಗಾಗಿ, 'ಎಲ್ಲಿದ್ದಾನೆ ಹಿರಣ್ಯಕಶಿಪು' ಎಂದು ಖಳನಾಯಕನನ್ನು ಹುಡುಕಬೇಕಾದ ಸಂದರ್ಭ ಇಂದಿನದು.



## ಸಣ್ಣದಾದ ಚೌಕಟ್ಟು

ಖಳನಾಯಕ ಎಂದರೆ ಅಬ್ಬರಿಸುವುದು, ಬೊಬ್ಬಿರಿಯುವುದು ಸಾಮಾನ್ಯ. ಆದರೆ, ಕಪ್ಪುಬಿಳುಪು ಚಿತ್ರಗಳಲ್ಲಿನ ಖಳನಾಯಕರ ವರಸೆಯೇ ಬೇರೆ. ಬಹಳಷ್ಟು ಸಂದರ್ಭದಲ್ಲಿ ಕತ್ತಲೆಯ ಆವರಣದಲ್ಲಿ ಉಳಿಯುವ ಅವರು, ತಮ್ಮ ಧ್ವನಿಯ ಮೂಲಕವಷ್ಟೇ ಪ್ರಕಟಗೊಳ್ಳುತ್ತಾರೆ. ವಿಲನ್ ಮುಖ ಕಾಣುವುದು ಚಿತ್ರದ ಕೊನೆಯಲ್ಲಿ ಮಾತ್ರ. ಹೀಗೆ ಧ್ವನಿಯ ಮೂಲಕವೇ ಪಾತ್ರದ ದುಷ್ಟತನವನ್ನು ಪ್ರೇಕ್ಷಕರಿಗೆ ಮುಟ್ಟಿಸುವ ಪಾತ್ರ ಯಾವುದೇ ಕಲಾವಿದನಿಗೆ ಬಹುದೊಡ್ಡ ಸವಾಲೇ ಸರಿ. 'ಗಂಧದಗುಡಿ' ಚಿತ್ರದಲ್ಲಿ ಬಾಲಕೃಷ್ಣ ಅವರು ನಿರ್ವಹಿಸಿರುವ ಪಾತ್ರ ನೆನಪಿಸಿಕೊಳ್ಳಿ. ಕಾಡು ಕೊಳ್ಳೆ ಹೊಡೆಯವ ದುಷ್ಟಕೂಟದ ಹಿರೀಕನಾಗಿ ಬಾಲಕೃಷ್ಣ ತಮ್ಮ ಮಾತಿನಲ್ಲಿ, ಕಣ್ಣನೋಟದಲ್ಲಿ ಮತಾಪು ಉರಿಸುತ್ತಾರೆ. 'ಆಕಸ್ಮಿಕ' ಚಿತ್ರದಲ್ಲಿನ ವಜ್ರಮುನಿ ಹಾಡುವ ರಂಗಗೀತೆಗಳು ರೈಲಿನ ಗಡಚಿಕ್ಕುವ ಸದ್ದಿನ ಜೊತೆಜೊತೆಗೇ ನೋಡುಗರಲ್ಲಿ ಕಂಪನದ ಅಲೆಗಳನ್ನು ಏಳಿಸುತ್ತವೆ. ಇಂಥ ರಸಾನುಭೂತಿಯನ್ನು ಸೃಷ್ಟಿಸುವುದು ನಮ್ಮ ಇಂದಿನ ಖಳಪಾತ್ರಗಳಿಗೆ ಸಾಧ್ಯವಾಗುತ್ತಿದೆಯೇ?

ಪ್ರಕಾಶ್ ರೈ: ಕನ್ನಡದಲ್ಲಿ ಹೀರೋ!
ತಮಿಳು– ತೆಲುಗಿನಲ್ಲಿ ವಿಲನ್!

ನಾಗಪ್ಪ, ತೂಗುದೀಪ ಶ್ರೀನಿವಾಸ್, ವಜ್ರಮುನಿ, ಸುಧೀರ್, ಪ್ರಭಾಕರ್, ಮುಸುರಿ ಕೃಷ್ಣಮೂರ್ತಿ, ಸುಂದರಕೃಷ್ಣ ಅರಸ್, ಎಂ.ಪಿ. ಶಂಕರ್, ಶಕ್ತಿಪ್ರಸಾದ್, ಧೀರೇಂದ್ರ ಗೋಪಾಲ್ – ಹೀಗೆ, ಕನ್ನಡ ಸಿನಿಮಾದ ಖಳನಟರ ಪರಂಪರೆ ಸಮೃದ್ಧವಾದುದು. ಇವರ ಜೊತೆಗೆ, ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ'ದಲ್ಲೇ (1934) ಪ್ರತಿನಾಯಕನ ಪಾತ್ರದಲ್ಲಿ ನಟಿಸಿದ ಆರ್. ನಾಗೇಂದ್ರರಾವ್ ಅವರನ್ನು ನೆನಪಿಸಿಕೊಳ್ಳಬೇಕು; 'ಭೂಕೈಲಾಸ' ಚಿತ್ರದ ರಾವಣ ಪಾತ್ರಧಾರಿ ಸುಬ್ಬಯ್ಯನಾಯ್ಡು ಅವರನ್ನು ನೆನಪಿಸಿಕೊಳ್ಳಬೇಕು. ಅಶ್ವತ್ಥ್‌ರಂಥ ಸಜ್ಜನ ಪಾತ್ರಗಳ ನಟ ಕೂಡ ಅಪರೂಪಕ್ಕೊಮ್ಮೆ ವಿಲನ್ ಪಾತ್ರಗಳಿಗೆ ಜೀವ ತುಂಬಿರುವುದಿದೆ. 'ಗಂಧದಗುಡಿ'ಯ ವಿಷ್ಣುವರ್ಧನ್, 'ನಾಗರಹಾವು' ಚಿತ್ರದ ಅಂಬರೀಷ್ ಅವರನ್ನು ಮರೆಯಲು ಸಾಧ್ಯವೇ? ಇವರೆಲ್ಲ ನಮ್ಮ ನಡುವೆಯೇ ಇದ್ದು, ನಮ್ಮ ಕುಟುಂಬದ ಪಾತ್ರಗಳೇ ಆಗಿದ್ದು ಕೆಡುಕಿನ ಸಾಧ್ಯತೆಗಳನ್ನು ಅಭಿವ್ಯಕ್ತಿಸುವ ಪಾತ್ರಗಳನ್ನು ಪ್ರತಿನಿಧಿಸಿದ್ದರು. ಕೌಟುಂಬಿಕ ಚೌಕಟ್ಟೇ ಇಲ್ಲದ ಇಂದಿನ ಸಿನಿಮಾಗಳಲ್ಲಿ ಇಂಥ ಸಾಧ್ಯತೆಗಳನ್ನು ಕಲ್ಪಿಸಿಕೊಳ್ಳುವಂತಿಲ್ಲ.



'ಕಬಾಲಿ'ಯ ಕಿಶೋರ್

ಇಂದಿನ ವಿಲನ್ ಪಾತ್ರಗಳಿಗೆ ಕೆಲವು ಸಾಮಾನ್ಯ ಲಕ್ಷಣಗಳಿವೆ. ಕೈಯಲ್ಲಿ ಮಚ್ಚಿರಬೇಕು, ಇಲ್ಲವೇ ಗನ್ ಇರಬೇಕು – ಸಿಗರೇಟ್, ಮದ್ಯದ ಬಟ್ಟಲು ಹಾಗೂ ಸೌಂದರ್ಯರೂಪಿ ನಶೆಯ ಲಲನೆ ಜೊತೆಗಿರಬೇಕು! ಇವೆಲ್ಲದರ ಜೊತೆಗೆ, ಕಣ್ಣ ಇಶಾರೆಗೆ ಓಗೊಡುವ ದೊಡ್ಡದೊಂದು ಗುಂಪಿರಬೇಕು. ರಕ್ತಪಾತ ಸಂಭವಿಸದೆ ವಿಲನ್ ಪಾತ್ರ ಕೊನೆಗೊಳ್ಳುವುದೇ ಇಲ್ಲ. ಕತ್ತಲ ಹಿನ್ನೆಲೆಯಲ್ಲೇ ಉಳಿದು ಧ್ವನಿಯ ಮೂಲಕವಷ್ಟೇ ನಾಯಕನ ಜೊತೆಗೆ ಪ್ರೇಕ್ಷಕರನ್ನೂ ಕಾಡಬಲ್ಲ ಪಾತ್ರಗಳನ್ನು ನಿಭಾಯಿಸಬಲ್ಲ ಪ್ರತಿಭೆ ನಮ್ಮ ಎಷ್ಟು ಕಲಾವಿದರಿಗಿದೆ? ರಂಗಭೂಮಿ ಹಿನ್ನೆಲೆಯ ಮೂರು–ನಾಲ್ಕು ಕಲಾವಿದರನ್ನು ಹೊರತುಪಡಿಸಿದರೆ ಈ ಪಟ್ಟಿ ಮುಂದೆ ಬೆಳೆಯುವುದಿಲ್ಲ.

ಖಳನ ಬಾಹ್ಯರೂಪ ಹಾಗೂ ನಡವಳಿಕೆಗೆ ಇಂದು ಹೆಚ್ಚು ಪ್ರಾಧಾನ್ಯತೆ. ನಮ್ಮೊಳಗೆ ಅಥವಾ ನಮ್ಮ ಬಂಧುಮಿತ್ರರೊಳಗೆ ಇರಬಹುದಾದ ಅಷ್ಟಾವಕ್ರರ ಬಗ್ಗೆ ಇಂದಿನ ಸಿನಿಮಾಗಳು ಮಾತನಾಡುವುದಿಲ್ಲ. ಯಾಕೆ ಹೀಗೆ?

'ಕಾಲ ಬದಲಾಗಿದೆ. ಸಮಾಜ ಬದಲಾಗಿದೆ. ಹಾಗಾಗಿ ಪಾತ್ರಗಳೂ ಬದಲಾಗಿವೆ' ಎನ್ನುತ್ತಾರೆ ಹಿರಿಯನಟ ದೇವರಾಜ್. ಆದರೆ, ಸಶಕ್ತ ಖಳಪಾತ್ರಗಳು ಸೃಷ್ಟಿಯಾಗುತ್ತಿಲ್ಲ ಹಾಗೂ ಪ್ರತಿಭಾವಂಥ ಕಲಾವಿದರು ಈ ಪೀಳಿಗೆಯಲ್ಲಿಲ್ಲ ಎನ್ನುವುದನ್ನು ಅವರು ಒಪ್ಪುವುದಿಲ್ಲ. 'ನಾಯಕರಷ್ಟೇ ಖಳನಾಯಕರೂ ಮುಖ್ಯ' ಎನ್ನುವ ದೇವರಾಜ್ – ರವಿಶಂಕರ್, ವಶಿಷ್ಠ ಸಿಂಹರಂಥ ಪ್ರತಿಭಾವಂತ ಖಳನಟರನ್ನು ಉದಾಹರಿಸುತ್ತಾರೆ. ನಾಯಕಿಯರಂತೆ ಖಳನಾಯಕರೂ ಕನ್ನಡ ಚಿತ್ರರಂಗಕ್ಕೆ ಆಮದಾಗುತ್ತಿದ್ದಾರೆ ಅಲ್ಲವೇ ಎನ್ನುವ ಪ್ರಶ್ನೆಯನ್ನೂ ದೇವರಾಜ್ ನಿರಾಕರಿಸುತ್ತಾರೆ. 'ಇಲ್ಲಿ ಎಲ್ಲರಿಗೂ ಅವಕಾಶ ಇದೆ. ಜನ ಯಾರನ್ನು ಮೆಚ್ಚುವರೋ ಅವರಿಗೆ ಹೆಚ್ಚು